## ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

**ಸಿ.ಸಿ. ನಂಃ 115/2020**

| | | | |
|---|---|---|---|
| ಸಾಕ್ಷಿಯ ಹೆಸರು | ಃ ಚಂದ್ರೇಗೌಡ | ಸಿ.ಡಬ್ಲ್ಯೂ | ಃ 02 |
| ತಂದೆ ಹೆಸರು | ಃ ಲಕ್ಕೇಗೌಡ | ಪಿ.ಡಬ್ಲ್ಯೂ | ಃ 02 |
| ವಯಸ್ಸು | ಃ 50 ವರ್ಷ | ಪ್ರಮಾಣೀಕರಿಸಿದ ದಿಃ | 10.02.2026. |
| ವೃತ್ತಿ | ಃ ಕೃಷಿ | | |
| ವಾಸ | ಃ ಸಂಕನಹಳ್ಳಿ ಗ್ರಾಮ | | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ.ಯವರಿಂದಃ

ನನಗೆ ಈ ಪ್ರಕರಣದ ಬಗ್ಗೆ ಏನು ತಿಳಿದಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿ ಯಾರೆಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನಿಂದ ಒಂದು ದಾಖಲೆಗೆ ಸಹಿ ಪಡೆದಿರುತ್ತಾರೆ. ಸಾಕ್ಷಿಗೆ ನಿ ಪಿ 2 ಕೃತ್ಯ ಸ್ಥಳ ಮತ್ತು ಅಮಾನತ್ ಮಹಜರ್ ನ್ನು ತೋರಿಸಲಾಗಿ ಅದರಲ್ಲಿ ಅವರು ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಸಹಿಯನ್ನು 2 (ಬಿ) ಎಂದು ಗುರುತಿಸಲಾಯಿತು.

(ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ. ಕೃತಸ್ಥಳ ಮಹಜರ್ ನ್ನು ಪರಿಶಿಲೀಸಿ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ - ಮಾನ್ಯ ಎ.ಪಿ.ಪಿ. ರವರಿಂದಃ

1. ದಿನಾಂಕ 30.06.2019 ರಂದು ಸಂಕನಹಳ್ಳಿ ಗ್ರಾಮದ ನಾಗಲಾಪುರ ಸಂಕನಹಳ್ಳಿ ಟಾರು ರಸ್ತೆಯ ದಕ್ಷಿಣಾ ಅಂಚಿನಲ್ಲಿರುವ ಶ್ರೀ ಕೋಡಿಯಮ್ಮ ದೇವಸ್ಥಾನ ಮುಂದೆ ಮದ್ಯಾಹ್ನ 1.00 ರಿಂದ 2.00 ರವರೆಗೆ ಪೊಲೀಸರು ಚಾ ಸಾ 1, ಚಾ ಸಾ 3 ಮತ್ತು ನನ್ನ ಸಮಕ್ಷಮ ಕೃತ್ಯ ಸ್ಥಳದಲ್ಲಿ, ದೇವಸ್ಥಾನ ದ ಬಾಗಿಲನ್ನು ಪರಿಶೀಲಿಸಲಾಗಿ ಬಾಗಿಲಿಗೆ ಕಂದು ಬಣ್ಣ ಇದ್ದು ಬಾಗಿಲು ಚಿಲಕ ಮತ್ತು ಬೀಗಗಳನ್ನು ಪರಿಶೀಲಿಸಲಾಗಿ ಬೀಗವನ್ನು ಹಾಕುವ ಕೊಂಡಿಯು ಮುರಿದು ಕೆಳಗೆ ಬಿದ್ದಿದ್ದು, ಅದು ಬೀಗ ಹಾಕಿದಂತೆಯೇ ಇತ್ತು, ಅದು ಸಹ ಕೆಳಗೆ ಬಿದ್ದಿರುತ್ತದೆ. ಸದರಿ ಬೀಗ ಹಾಕುವ ಕಬ್ಬಿಣದ ಕೊಂಡಿಯನ್ನು ಯಾವುದೋ ಆಯುಧದಿಂದ ಮುರಿದ ನಿಶಾನೆ ಕಂಡು ಬಂದಿದ್ದು ಸದರಿ ಕಬ್ಬಿಣದ ಕೊಂಡಿಯನ್ನು ಮತ್ತು ಬಾಗಿಲಿಗೆ ಅಳವಡಿಸುವ ಕ್ಯಾಂಪ್ ನ್ನು ಮತ್ತು ಟೈಮ್ ಲಾಂಗ್ ಲೈಫ್ ನ ಸ್ಟೀಲ್ ಬೀಗವನ್ನು ಪೊಲೀಸರು ಮುಂದಿನ ತನಿಖೆಗೆ ಅಮಾನತ್ ಪಡಿಸಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯ ಕಲಂ 161 ರ ಹೇಳಿಕೆಯನ್ನು ನಿ ಪಿ 5 ಎಂದು, ಸಾಕ್ಷಿಯ ಮುಂದುವರೆದ ಹೇಳಿಕೆಯನ್ನು ನಿ ಪಿ 6 ಎಂದು ಗುರುತಿಸಲಾಯಿತು.

2. ಆರೋಪಿ ನನಗೆ ಪರಿಚಯಸ್ಥರಾದರಿಂದ ಅವರೊಂದಿಗೆ ರಾಜೀ ಮಾಡಿಕೊಂಡ ಕಾರಣ ಅವರಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಪರ ಪಾಟಿ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ:

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,
ಹೊಳೆನರಸೀಪುರ